

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 08–02–2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಈ ದಿನ ನಾನು ಪ್ರಸ್ತಾಪಿಸುವ ಸಹಾಬರಲ್ಲಿ ಪ್ರಥಮ ಹೆಸರು ಹಝ್ರತ್ ಅಬೂ ಮುಲೈಲ್ ಬಿನ್ ಅಲ್ ಅಝ್‌ಅರ್(ರ) ಅವರದಾಗಿದೆ. ಅವರು ಅನ್‌ಸಾರ್‌ಗಳ ಔಸ್ ಗೋತ್ರದವರಾಗಿದ್ದರು. ಅವರು ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸುವ ಭಾಗ್ಯ ಗಳಿಸಿದರು. ಎರಡನೆಯ ಸಹಾಬಿ ಹಝ್ರತ್ ಅನಸ್ ಬಿನ್ ಮುಆಝ್ ಅನ್‌ಸಾರಿ(ರ). ಅವರು ಅನ್‌ಸಾರ್‌ಗಳ ಖಝ್‌ರಜ್ ಗೋತ್ರದ ಬನೂ ನಜ್ಜಾದ್ ಶಾಖೆಗೆ ಸೇರಿದ್ದರು. ಅವರು ಬದರ್, ಉಹುದ್, ಖಂದಕ್ ಸಮೇತ ಎಲ್ಲಾ ಯುದ್ಧಗಳಲ್ಲಿ ಹಝ್ರತ್ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಭಾಗವಹಿಸಿದರು. ಬಿಅ್‌ರ್ ಮಊನದಲ್ಲಿ ಶಹೀದರಾದರು. ಇನ್ನೊಬ್ಬ ಸಹಾಬಿ ಹಝ್ರತ್ ಅಬೂ ಶೈಖ್ ಉಬಯ್ಯುಬ್ನು ಸಾಬಿತ್ ರಝಿಯಲ್ಲಾಹು ಅನ್‌ಹು. ಅವರು ಖಝ್‌ರಜ್ ಗೋತ್ರದ ಬನೂ ಅದಿ ಶಾಖೆಗೆ ಸೇರಿದ್ದರು. ಹಝ್ರತ್ ಉಬಯ್ಯುಬ್ನು ಸಾಬಿತ್ ಅವರು ಹಝ್ರತ್ ಹಸ್ಸಾನ್ ಬಿನ್ ಸಾಬಿತ್ ಮತ್ತು ಹಝ್ರತ್ ಔಸ್ ಬಿನ್ ಸಾಬಿತರ ಸಹೋದರರಾಗಿದ್ದರು. ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದರು. ಅವರು ಬಿಅ್‌ರ್ ಮಊನದ ಘಟನೆಯಲ್ಲಿ ಶಹೀದರಾದರು.

ಮುಂದಿನ ಸಹಾಬಿ ಹಝ್ರತ್ ಅಬೂ ಬುರ್‌ದ ಬಿನ್ ನಿಯಾರ್(ರ). ಅವರು ಅಬೂ ಬುರ್‌ದ ಎಂಬ ಉಪನಾಮದಲ್ಲಿ ಪ್ರಸಿದ್ಧರಾಗಿದ್ದರು. ಅವರ ಹೆಸರು ಹಾನಿ ಎಂದಾಗಿತ್ತು. ಹಝ್ರತ್ ಅಬೂ ಬುರ್‌ದ ಹಝ್ರತ್ ಬರಾಅ್ ಬಿನ್ ಆಝಿಬರ ಸೋದರಮಾವನಾಗಿದ್ದರು. ಅವರು ಬೈಅತೆ ಅಖಬ ಸಾನಿಯಾದಲ್ಲಿ ಭಾಗವಹಿಸಿದರು. ಬದರ್, ಉಹುದ್, ಖಂದಕ್ ಸಮೇತ ಎಲ್ಲ ಯುದ್ಧಗಳಲ್ಲಿ ಭಾಗವಹಿಸಿದ್ದರು. ಮಕ್ಕದ ವಿಜಯದಿನ ಬನೂ ಹಾರಿಸ ಗೋತ್ರದ ಪತಾಕೆ ಹಝ್ರತ್ ಅಬೂ ಬುರ್‌ದರವರ ಕೈಯಲ್ಲಿತ್ತು. ಹಝ್ರತ್ ಅಬೂ ಅಬಸ್ ಮತ್ತು ಹಝ್ರತ್ ಅಬೂ ಬುರ್‌ದ ಮುಸ್ಲಿಮರಾದಾಗ ಅವರಿಬ್ಬರೂ ಬನೂ ಹಾರಿಸ ಗೋತ್ರದ ವಿಗ್ರಹಗಳನ್ನು ಮುರಿದು ಹಾಕಿದರು. ಹಝ್ರತ್ ಅಬೂ ಉಮಾಮ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬದರ್ ಯುದ್ಧಕ್ಕೆ ಹೊರಡಲು ನಿರ್ಧರಿಸಿದಾಗ ಹಝ್ರತ್ ಅಬೂ ಉಮಾಮ ಸಹ ಅವರೊಂದಿಗೆ ಹೊರಡಲು ಸಿದ್ಧರಾದರು. ಆಗ ಅವರ ಸೋದರಮಾವ ಹಝ್ರತ್ ಅಬೂ ಬುರ್‌ದ ಬಿನ್ ನಿಯಾರ್ ಹೇಳಿದರು: ನೀನು ನಿನ್ನ ತಾಯಿಗೆ ಸೇವೆ ಮಾಡಲು ಇಲ್ಲಿಯೇ ಇರು. ಅವರ ತಾಯಿ ಆಗ ರೋಗಬಾಧಿತೆಯಾಗಿದ್ದರು. ಹಝ್ರತ್ ಅಬೂ ಉಮಾಮ ಹೇಳಿದರು: ನನ್ನ ತಾಯಿ ನಿಮ್ಮ ಸಹೋದರಿಯಾಗಿದ್ದಾರಷ್ಟೆ. ನೀವು ಇಲ್ಲಿ ಇರಿ. ಈ ವಿಷಯ ಹುಝೂರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ಬಂದಾಗ ಅವರು ಹಝ್ರತ್ ಅಬೂ ಉಮಾಮರೊಂದಿಗೆ ಎಂದರೆ ರೋಗಿಯಾದ ಮಹಿಳೆಯ ಪುತ್ರನೊಂದಿಗೆ ಆಕೆಯ ಸಮೀಪದಲ್ಲಿರಲು ಹೇಳಿದರು. ಹಝ್ರತ್ ಅಬೂ ಬುರ್‌ದ ಸೈನ್ಯದೊಂದಿಗೆ ಹೊರಟರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯುದ್ಧದ ನಂತರ ಮರಳಿ ಬಂದಾಗ ಹಝ್ರತ್ ಅಬೂ ಉಮಾಮರ ತಾಯಿ ಮೃತರಾಗಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ಜನಾಝ ನಮಾಝ್ ನಿರ್ವಹಿಸಿದರು. ಉಹುದ್ ಯುದ್ಧದ ದಿನ ಮುಸ್ಲಿಮ್ ಸೈನ್ಯದ ಬಳಿ ಎರಡು ಕುದುರೆಗಳಿದ್ದುವು. ಒಂದು ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿ ಇತ್ತು. ಅದರ ಹೆಸರು ಅಸ್ಸಖ್ಫ್. ಇನ್ನೊಂದು ಕುದುರೆ ಹಝ್ರತ್ ಅಬೂ ಬುರ್‌ದರವರ ಬಳಿ ಇತ್ತು. ಅದರ ಹೆಸರು ಮಲಾಫಿಅ್ ಎಂದಾಗಿತ್ತು. ಹಝ್ರತ್ ಅಬೂ ಬುರ್‌ದ ಹಝ್ರತ್ ಅಲಿಯವರೊಂದಿಗೆ(ರ) ಎಲ್ಲ ಯುದ್ಧಗಳಲ್ಲಿ ಭಾಗವಹಿಸಿದ್ದರು. ಹಝ್ರತ್ ಮುಆವಿಯರ ಆಡಳಿತ ಕಾಲದಲ್ಲಿ ಅವರು ನಿಧನರಾದರು.

ಹಝ್ರತ್ ಬರಾಅ್ ಬಿನ್ ಆಝಿಬ್ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈದುಲ್ ಅಝ್‌ಹಾ ದಿನ ನಮಾಝ್ ನಿರ್ವಹಿಸಿದ ನಂತರ ನಮ್ಮನ್ನು ಸಂಬೋಧಿಸಿ ಹೇಳಿದರು: ಯಾರು ನಮ್ಮ ಹಾಗೆ ನಮಾಝ್ ಮಾಡಿ ಅನಂತರ ನಾವು ಖುರ್ಬಾನಿ ಮಾಡಿದ ಹಾಗೆ ಖುರ್ಬಾನಿ ಮಾಡಿದನೋ ಅವನು ಸರಿಯಾಗಿ ಖುರ್ಬಾನಿ ಮಾಡಿದನು. ಆದರೆ ಯಾರಾದರೂ ನಮಾಝ್‌ಗೆ ಮೊದಲು ಖುರ್ಬಾನಿ ಮಾಡಿದರೆ ಅದು ಆಡಿನ ಮಾಂಸಕ್ಕೋಸ್ಕರವೇ ಆಗಿರುತ್ತದೆ. ಅದು ಖುರ್ಬಾನಿ ಆಗುವುದಿಲ್ಲ. ಆಗ ಹಝ್ರತ್ ಅಬೂ ಬುರ್‌ದ ಹೇಳಿದರು: ಅಲ್ಲಾಹನ ಸಂದೇಶವಾಹಕರೇ, ನಾನು ನಮಾಝ್‌ಗೆ ಹೊರಡುವ ಮೊದಲೇ ಖುರ್ಬಾನಿ ಮಾಡಿದೆ. ಈ ದಿನ ತಿನ್ನುವ ಮತ್ತು ಕುಡಿಯುವ ದಿನವೆಂದು ನಾನು ಯೋಚಿಸಿದೆ. ಆದುದರಿಂದ ನಾನು ಬೇಗನೆ ತಿಂದೆನು ನನ್ನ ಮನೆಯವರಿಗೂ ನೆರೆಹೊರೆಯವರಿಗೂ ತಿನ್ನಿಸಿದೆನು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನಿಮ್ಮದು ಖುರ್ಬಾನಿ ಅಲ್ಲ. ಆಡು ಮಾಂಸಕ್ಕೋಸ್ಕರವಾಯಿತು. ಆಗ ಹಝ್ರತ್ ಅಬೂ ಬುರ್‌ದ ಹೇಳಿದರು: ನನ್ನ ಬಳಿ ಒಂದು ವರ್ಷ ಪ್ರಾಯದ ಹೆಣ್ಣಾಡುಗಳಿವೆ. ಅದು ಎರಡು ಆಡುಗಳಿಗಿಂತ ಉತ್ತಮವಾಗಿವೆ. ಎಂದರೆ ಅವು ದಷ್ಟಪುಷ್ಟವಾಗಿವೆ. ಅವು ಒಂದು ವರ್ಷದವುಗಳಾದರೂ ಎರಡು ಆಡುಗಳಿಗಿಂತ ಉತ್ತಮವಾಗಿವೆ. ದಪ್ಪಗಾಗಿವೆ. ನಾನು ಖುರ್ಬಾನಿ ಮಾಡಿದರೆ ಅದು ಸಾಕಾಗುವುದೇ. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನೀವು ಹಾಗೆ ಮಾಡಬಹುದು. ಅದು ನಿಮಗೆ ಸಾಕು. ಆದರೆ ನಿಮ್ಮ ನಂತರ ಯಾರಿಗೂ

ಸಾಕಾಗಲಾರದು. ಎಂದರೆ ಈ ಅನುಮತಿ ನಿಮಗೆ ಮಾತ್ರ ನೀಡಲಾಗಿದೆ.

ಇನ್ನೊಬ್ಬ ಸಹಾಬಿ ಹಝ್ರತ್ ಅಸದ್ ಬಿನ್ ಯಝೀದ್(ರ). ಅವರು ಅನ್‌ಸಾರ್ ಗೋತ್ರವಾದ ಖಝ್ರಜ್‌ನ ಬನೂ ಝುರೀಖ್ ಶಾಖೆಗೆ ಸೇರಿದ್ದರು. ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಇನ್ನೊಬ್ಬ ಬದರೀ ಸಹಾಬಿ ಹಝ್ರತ್ ತಮೀಮ್ ಬಿನ್ ಯಾರ್ ಅನ್‌ಸಾರಿ(ರ). ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಇನ್ನೊಬ್ಬ ಸಹಾಬಿ ಹಝ್ರತ್ ಔಸ್ ಬಿನ್ ಸಾಬಿತ್ ಬಿನ್ ಮುಂಝಿರ್(ರ). ಅವರು ಅನ್‌ಸಾರಿಯಾಗಿದ್ದು ಪ್ರಸಿದ್ಧ ಸಹಾಬಿ ಹಝ್ರತ್ ಶದ್ದಾದ್ ಬಿನ್ ಔಸ್‌ರವರ ಪಿತನಾಗಿದ್ದರು. ಅವರು ಅಖಬ ಸಾನಿಯದಲ್ಲಿ ಸೇರಿದ್ದರು. ಅವರು ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದರು. ಪ್ರಸಿದ್ಧ ಕವಿ ಹಝ್ರತ್ ಹಸ್ಸಾನ್ ಬಿನ್ ಸಾಬಿತ್ ಮತ್ತು ಹಝ್ರತ್ ಉಬಯ್ಯುಬ್ನು ಸಾಬಿತ್ ಅವರ ಸಹೋದರರಾಗಿದ್ದರು. ಅವರು ಉಹುದ್ ಯುದ್ಧದಲ್ಲಿ ಶಹೀದರಾದರು.

ಇನ್ನೊಬ್ಬ ಸಹಾಬಿ ಹಝ್ರತ್ ಸಾಬಿತ್ ಬಿನ್ ಖನ್‌ಸಾಅ್(ರ). ಅವರು ಬನೂ ಗನಮ್ ಬಿನ್ ಅದೀ ಬಿನ್ ನಜ್ಜಾರ್ ಗೋತ್ರಕ್ಕೆ ಸೇರಿದ್ದರು. ಅವರು ಬದರ್‌ನಲ್ಲಿ ಭಾಗವಹಿಸುವ ಭಾಗ್ಯ ಗಳಿಸಿದರು. ಅವರ ಬಗ್ಗೆ ಇಷ್ಟೇ ತಿಳಿದಿದೆ. ಇನ್ನೊಬ್ಬ ಸಹಾಬಿ ಹಝ್ರತ್ ಔಸ್ ಬಿನ್ ಸಾಮಿತ್(ರ). ಅವರು ಹಝ್ರತ್ ಉಬಾದ ಬಿನ್ ಸಾಮಿತರ ಸಹೋದರ. ಹಝ್ರತ್ ಔಸ್ ಬದರ್, ಉಹುದ್ ಮತ್ತು ಇತರ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರು ಕವಿಯೂ ಆಗಿದ್ದರು. ಹಝ್ರತ್ ಔಸ್ ಬಿನ್ ಸಾಮಿತ್ ಮತ್ತು ಶದ್ದಾದ್ ಬಿನ್ ಔಸ್ ಅನ್‌ಸಾರಿ ಬೈತುಲ್ ಮುಖದ್ದಿಸ್‌ನಲ್ಲಿ ವಾಸಿಸಲು ತೊಡಗಿದರು. ಅವರು ಫಲೆಸ್ತೀನ್ ಪ್ರದೇಶದ ರಮೆಲ್ಲಾದಲ್ಲಿ ಹಿಜರಿ 34ರಲ್ಲಿ ಮೃತರಾದರು. ಆಗ ಅವರ ಪ್ರಾಯ 72 ಆಗಿತ್ತು.

ಇನ್ನೊಬ್ಬ ಸಹಾಬಿ ಅರ್‌ಖಮ್ ಬಿನ್ ಅಬೀಅರ್‌ಖಮ್(ರ). ಅವರು ಬನೂ ಮಖ್‌ಝೂಮ್ ಗೋತ್ರದವರಾಗಿದ್ದರು. ಅವರು ಮುಸ್ಲಿಮರಾದ ಪ್ರಥಮ ಸಹಾಬರಲ್ಲಿ ಸೇರಿದ್ದರು. ಕೆಲವರ ಅಭಿಪ್ರಾಯ ಪ್ರಕಾರ ಅವರಿಗಿಂತ ಮೊದಲು ಹನ್ನೊಂದು ಜನರು ಮಾತ್ರ ಮುಸ್ಲಿಮರಾಗಿದ್ದರು. ಇನ್ನು ಕೆಲವರು ಹೇಳುತ್ತಾರೆ, ಅವರು ಮುಸ್ಲಿಮರಾದವರಲ್ಲಿ ಏಳನೆಯವರೆಂದು. ಹಝ್ರತ್ ಉರ್‌ವ ಬಿನ್ ಝುಬೈರ್ ವರದಿ ಮಾಡುತ್ತಾರೆ: ಹಝ್ರತ್ ಅರ್‌ಖಮ್, ಹಝ್ರತ್ ಅಬೂ ಉಬೈದ ಬಿನ್ ಜರಾಹ್ ಮತ್ತು ಹಝ್ರತ್ ಉಸ್ಮಾನ್ ಬಿನ್ ಮಝ್‌ಊನ್ ಒಟ್ಟಿಗೆ ಸೇರಿ ಒಂದೇ ಸಮಯದಲ್ಲಿ ಮುಸ್ಲಿಮರಾದರು ಎಂದು. ಹಝ್ರತ್ ಅರ್‌ಖಮ್‌ರವರ ಒಂದು ಮನೆ ಮಕ್ಕದ ಹೊರಗೆ ಸಫಾ ಪರ್ವತದ ಸಮೀಪವಿತ್ತು. ಇದು ಚರಿತ್ರೆಯಲ್ಲಿ ದಾರ್ ಅರ್‌ಖಮ್ ಎಂದು ಪ್ರಸಿದ್ಧವಾಗಿದೆ. ಈ ಮನೆಯಲ್ಲಿ ಹಝ್ರತ್ ರಸೂಲ್ ಸಲ್ಲಾಹು ಅಲೈಹಿ ವಸಲ್ಲಮರು ಮತ್ತು ಮುಸ್ಲಿಮರಾದ ಜನರು ಆರಾಧನೆ ಮಾಡುತ್ತಿದ್ದರು. ಹಝ್ರತ್ ಉಮರ್(ರ) ಇಸ್ಲಾಮ್ ಧರ್ಮಕ್ಕೆ ಪ್ರವೇಶಿಸಿದ್ದು ಸಹ ಇದೇ ಸ್ಥಳದಲ್ಲಾಗಿತ್ತು.

(ದಾರ್ ಅರ್‌ಖಮ್ ಬಗ್ಗೆ ವಿವರಿಸುತ್ತಾ ಹುಝೂರ್ ಹೇಳಿದರು:) ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಯೋಚಿಸಿದರು: ಮಕ್ಕದಲ್ಲಿ ಒಂದು ತಬ್ಲೀಗಿ ಕೇಂದ್ರವಿರಬೇಕು. ಅಲ್ಲಿ ಮುಸ್ಲಿಮರು ನಮಾಝ್ ಮೊದಲಾದುವುಗಳನ್ನು ನಿರ್ಭಯರಾಗಿ ನಿರ್ವಹಿಸುವಂತಿರಬೇಕು. ಅಲ್ಲಿ ಸಮಾಧಾನದಿಂದ ಹಾಗೂ ಶಾಂತಿಯುತವಾಗಿ ಇಸ್ಲಾಮಿನ ತಬ್ಲೀಗ್ ಮಾಡುವಂತಾಗಬೇಕು. ಇದಕ್ಕೋಸ್ಕರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಬ್ಬ ನವ ಮುಸ್ಲಿಮರಾದ ಹಝ್ರತ್ ಅರ್‌ಖಮರ ಮನೆಯನ್ನು ಇಷ್ಟಪಟ್ಟರು. ಅದು ಸಫಾ ಪರ್ವತದ ಸಮೀಪದಲ್ಲಿತ್ತು. ಅನಂತರ ಎಲ್ಲಾ ಮುಸ್ಲಿಮರು ಜಮಾಯಿಸುವುದು ಮತ್ತು ನಮಾಝ್ ನಿರ್ವಹಿಸುತ್ತಿದ್ದುದು ಅದೇ ಸ್ಥಳದಲ್ಲಾಗಿತ್ತು. ಇದೇ ಕಾರಣದಿಂದ ಈ ಮನೆ ಚರಿತ್ರೆಯಲ್ಲಿ ಪ್ರಸಿದ್ಧವಾಗಿದೆ. ಅದು ದಾರುಲ್ ಇಸ್ಲಾಂ ಎಂಬ ಹೆಸರಲ್ಲಿ ಸಹ ಪ್ರಸಿದ್ಧವಾಗಿದೆ.

ಮದೀನಕ್ಕೆ ಹೋದ ನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬೂ ತಲ್‌ಹ ಝೈದ್ ಬಿನ್ ಸಹ್ಲ್‌ರೊಂದಿಗೆ ಹಝ್ರತ್ ಅರ್‌ಖಮ್ ರಝಿಯಲ್ಲಾಹು ಅನ್‌ಹುರ ಸಹೋದರ ಸಂಬಂಧವನ್ನು ಸ್ಥಾಪಿಸಿದರು. ಹಝ್ರತ್ ಅರ್‌ಖಮ್ ಬದರ್, ಉಹುದ್ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದರು. ಅವರು ಹಿಲ್‌ಫುಲ್ ಫುಝೂಲ್ ಒಪ್ಪಂದದಲ್ಲಿಯೂ ಸೇರಿದ್ದರು. ಅವರು ಹಿಜರಿ 53ರಲ್ಲಿ ನಿಧನ ಹೊಂದಿದರು. ಆಗ ಅವರ ಪ್ರಾಯ 83 ವರ್ಷ ಆಗಿತ್ತು. ಅವರು ವಸಿಯ್ಯತ್ ಮಾಡಿದ್ದರು, ತನ್ನ ಜನಾಝ ನಮಾಝ್ ಹಝ್ರತ್ ಸಅದ್ ಬಿನ್ ಅಬೀ ವಖಾಸ್ ನಿರ್ವಹಿಸಬೇಕು ಎಂದು. ಆಗ ಅವರು ಅಖೀಲ್ ಮಖಾಮ್‌ನಲ್ಲಿದ್ದರು. ಸಅದ್ ಬಿನ್ ಅಬೀ ವಖಾಸ್ ಆಗಮಿಸಿದ ನಂತರ ಹಝ್ರತ್ ಅರ್‌ಖಮರ ನಮಾಝೆ ಜನಾಝ ಅವರು ನಿರ್ವಹಿಸಿದರು. ಜನ್ನತುಲ್ ಬಖೀಅ್ ಖಬರಸ್ಥಾನದಲ್ಲಿ ದಫನ್ ಮಾಡಲಾಯಿತು. ಒಮ್ಮೆ ಹಝ್ರತ್ ಅರ್‌ಖಮ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಬೈತುಲ್ ಮುಖದ್ದಿಸ್‌ಗೆ ಹೋಗಿ ಅಲ್ಲಿ ನಮಾಝ್ ಮಾಡಲು ಅನುಮತಿ ಕೇಳಿದ್ದರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನನ್ನ ಮದೀನದಲ್ಲಿರುವ ಈ ಮಸ್‌ಜಿದ್‌ನಲ್ಲಿ ಮಾಡುವ ನಮಾಝ್ ಇತರ ಸಾವಿರ ಮಸ್‌ಜಿದ್‌ಗಳ ನಮಾಝ್‌ಗಿಂತ ಉತ್ತಮವಾಗಿದೆ. ಆಗ ಹಝ್ರತ್ ಅರ್‌ಖಮ್ ತನ್ನ ನಿರ್ಧಾರ ತ್ಯಜಿಸಿದರು.

ಇನ್ನೊಬ್ಬ ಸಹಾಬಿ ಹಝ್ರತ್ ಬಸ್‌ಬಸ್ ಬಿನ್ ಅಮರ್(ರ). ಅವರು ಬನೂ ಸಾಯಿದ ಬಿನ್ ಕಅಬ್ ಬಿನ್ ಖಝ್ರಜ್ ಗೋತ್ರದವರಾಗಿದ್ದರು. ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬಸ್‌ಬಸ್ ಮತ್ತು ಅದೀ ಬಿನ್ ಅದೀ ಎಂಬ ಇಬ್ಬರು ಸಹಾಬರನ್ನು ಶತ್ರುಗಳ ಚಲನವಲನಗಳನ್ನು ತಿಳಿಯಲು ಬದರ್ ಕಡೆಗೆ ಕಳುಹಿಸಿ ಬಹಳ ಬೇಗನೆ ವರದಿ ಮಾಡಬೇಕೆಂದು ಅಜ್ಞಾಪಿಸಿದ್ದರು. ಅವರಿಬ್ಬರೂ ಬದರ್‌ಗೆ ತಲಪಿದಾಗ ಒಂದು ದಿಬ್ಬದ ಹತ್ತಿರ ತಮ್ಮ ಒಂಟೆಗಳನ್ನು ಕುಳ್ಳಿರಿಸಿ ತಮ್ಮ ಪಾತ್ರೆಗಳಿಂದ ಬಾವಿಯಿಂದ ನೀರೆತ್ತಲು ಹೋಗಿ ನೀರು ಕುಡಿದರು. ಆ ಮಧ್ಯೆ ಅವರು ಇಬ್ಬರು ಹೆಂಗಸರು ಮಾತನಾಡುವುದನ್ನು ಆಲಿಸಿದರು. ಅವರು ಯಾವುದೋ ಒಂದು ವ್ಯಾಪಾರಿ ಸಂಘ ಆಗಮಿಸುವ ಬಗ್ಗೆ

ಹೇಳುತ್ತಿದ್ದರು. ನಂತರ ಅವರಿಬ್ಬರೂ ಮರಳಿ ಮದೀನಕ್ಕೆ ಬಂದು ಈ ವಿಷಯ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿಸಿದರು.

ಇನ್ನೊಬ್ಬ ಸಹಾಬಿ ಹಝ್ರತ್ ಸಅಲಬ ಬಿನ್ ಅಮರ್ ಅನ್ಸಾರಿ(ರ). ಅವರು ಬನೂ ನಜ್ಜಾರ್ ಗೋತ್ರದವರು. ಅವರ ಮಾತೆಯ ಹೆಸರು ಕಬ್ಶ. ಅವರು ಪ್ರಸಿದ್ಧ ಕವಿ ಹಸ್ಸಾನ್ ಬಿನ್ ಸಾಬಿತರ ಸಹೋದರಿಯಾಗಿದ್ದರು. ಹಝ್ರತ್ ಸಅಲಬ ಬದರ್ ಸಮೇತ ಎಲ್ಲ ಯುದ್ಧಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆ ಸೇರಿದ್ದರು. ಬನೂ ಸಲ್ಮಾ ಗೋತ್ರದವರ ವಿಗ್ರಹ ಮುರಿದವರಲ್ಲಿ ಅವರು ಸಹ ಸೇರಿದ್ದರು. ಅವರು ಹಝ್ರತ್ ಉಸ್ಮಾನ್‌ರ(ರ) ಖಿಲಾಫತ್ ಕಾಲದಲ್ಲಿ ಮದೀನದಲ್ಲಿ ಮೃತರಾದರು. ಇನ್ನೊಬ್ಬ ಸಹಾಬಿ ಹಝ್ರತ್ ಸಅಲಬ ಬಿನ್ ಗನಮ(ರ). ಅವರ ತಾಯಿಯ ಹೆಸರು ಜಹೀರ ಬಿನ್ತ್ ಖೈಸ್. ಅವರು ಅನ್ಸಾರ್‌ಗಳ ಬನೂ ಸಲ್ಮಾ ಗೋತ್ರದವರಾಗಿದ್ದರು. ಬೈಅತೆ ಅಖಬ ಸಾನಿಯದಲ್ಲಿ ಸೇರಿದ ಎಪ್ಪತ್ತು ಸಹಾಬಿಗಳಲ್ಲಿ ಅವರು ಸೇರಿದ್ದರು. ಅವರು ಬದರ್, ಉಹುದ್, ಖಂದಕ್ ಯುದ್ಧಗಳಲ್ಲಿ ಭಾಗವಹಿಸಿದರು. ಇನ್ನೊಬ್ಬ ಸಹಾಬಿ ಹಝ್ರತ್ ಜಾಬಿರ್ ಬಿನ್ ಖಾಲಿದ್(ರ). ಅವರು ಅನ್ಸಾರ್‌ಗಳ ಬನೂ ದೀನಾರ್ ಗೋತ್ರದವರು. ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದರು. ಇನ್ನೊಬ್ಬ ಸಹಾಬಿ ಹಝ್ರತ್ ಹಾರಿಸ್ ಬಿನ್ ನುಅ್‌ಮಾನ್ ಬಿನ್ ಉಮಯ್ಯ ಅನ್ಸಾರಿ(ರ). ಅವರು ಔಸ್ ಗೋತ್ರದವರು. ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆ ಭಾಗವಹಿಸಿದರು. ಇನ್ನೊಬ್ಬ ಸಹಾಬಿ ಹಝ್ರತ್ ಹಾರಿಸ್ ಬಿನ್ ಅನಸ್ ಅನ್ಸಾರಿ(ರ). ಅವರ ತಾಯಿಯ ಹೆಸರು ಹಝ್ರತ್ ಉಮ್ಮು ಶರೀಕ್. ಅವರ ತಂದೆ ಅನಸ್ ಬಿನ್ ರಾಫಿಅ್. ಅವರು ಔಸ್ ಗೋತ್ರದ ಬನೂ ಅಬ್ದು ಅಶ್‌ಹಲ್ ಶಾಖೆಯವರು. ಅವರು ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಉಹುದ್ ಯುದ್ಧದಲ್ಲಿ ಶಹೀದರಾದರು.

ಇನ್ನೊಬ್ಬ ಸಹಾಬಿ ಹಝ್ರತ್ ಹರೀಸ್ ಬಿನ್ ಝೈದ್ ಅನ್ಸಾರಿ(ರ). ಅವರು ಖಝ್ರಜ್ ಗೋತ್ರದ ಬನೂ ಝೈದ್ ಬಿನ್ ಹಾರಿಸ್ ಶಾಖೆಗೆ ಸೇರಿದ್ದರು. ಅವರು ತನ್ನ ಸಹೋದರ ಹಝ್ರತ್ ಅಬ್ದುಲ್ಲಾ ಜೊತೆಗೆ ಬದರ್ ಯುದ್ಧದಲ್ಲಿ ಭಾಗವಹಿಸಿದರು. ಅವರಿಗೆ ಅಝಾನ್ ಕರೆ ನೀಡುವುದಕ್ಕೆ ಸಂಬಂಧಿಸಿ ಸ್ವಪ್ನ ಕಾಣಿಸಿತ್ತು. ಅವರು ಉಹುದ್ ಯುದ್ಧದಲ್ಲಿಯೂ ಭಾಗವಹಿಸಿದ್ದರು.

ಇನ್ನೊಬ್ಬ ಸಹಾಬಿ ಹಝ್ರತ್ ಹಾರಿಸ್ ಬಿನ್ ಅಸ್‌ಅಮ(ರ). ಅವರು ಅನ್ಸಾರ್‌ಗಳ ಬನೂ ನಜ್ಜಾರ್ ಗೋತ್ರದವರಾಗಿದ್ದರು. ಅವರು ಬಿಅ್‌ರ್ ಮಊನ ಘಟನೆಯಲ್ಲಿ ಶಹೀದರಾದರು. ಹಝ್ರತ್ ಹಾರಿಸ್ ಮತ್ತು ಹಝ್ರತ್ ಸುಹೈಬ್ ಬಿನ್ ಸನಾನ್ ಮಧ್ಯೆ ಸಹೋದರ ಸಂಬಂಧವನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ಥಾಪಿಸಿದ್ದರು. ಹಝ್ರತ್ ಹಾರಿಸ್ ಬಿನ್ ಅಸ್‌ಅಮ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಬದರ್ ಯುದ್ಧಕ್ಕೆ ಹೊರಟು ಅರ್ರೂಹ್ ಎಂಬ ಸ್ಥಳಕ್ಕೆ ತಲಪಿದಾಗ ಅವರಿಗೆ ಪ್ರಯಾಣ ಮುಂದುವರಿಸುವ ಶಕ್ತಿ ಇಲ್ಲವಾಯಿತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ಮದೀನಕ್ಕೆ ವಾಪಾಸು ಕಳುಹಿಸಿದರು. ಆದರೆ ಅವರ ಸಂಕಲ್ಪ ಮತ್ತು ಉತ್ಸಾಹವನ್ನು ಕಂಡು ಅವರನ್ನು ಬದರ್ ಯುದ್ಧದಲ್ಲಿ ಭಾಗವಹಿಸಿದವರಲ್ಲಿ ಸೇರಿಸಿದರು. ಅವರು ಉಹುದ್ ಯುದ್ಧದಲ್ಲಿ ಭಾಗವಹಿಸಿದ್ದರು. ಆ ದಿನ ಜನರು ಚದುರಿ ಹೋಗಿದ್ದಾಗ ಹಝ್ರತ್ ಹಾರಿಸ್ ಸ್ಥಿರವಾಗಿ ನಿಂತಿದ್ದರು. ಹಝ್ರತ್ ಹಾರಿಸ್ ಬಿಅ್‌ರ್ ಮಊನ ಘಟನೆಯಲ್ಲಿ ಸಹ ಭಾಗಿಯಾಗಿದ್ದರು. ಸಹಾಬರನ್ನು ಶತ್ರುಗಳು ಶಹೀದರನ್ನಾಗಿ ಮಾಡಿದಾಗ ಹಝ್ರತ್ ಹಾರಿಸ್ ಮತ್ತು ಅಮರ್ ಬಿನ್ ಉಮಯ್ಯ ಒಂಟೆಗಳನ್ನು ಮೇಯಿಸಲು ಹೋಗಿದ್ದರು. ಅವರು ತಂಗುದಾಣಕ್ಕೆ ಮರಳಿ ಬಂದಾಗ ಪಕ್ಷಿಗಳು ಅಲ್ಲಿ ಕುಳಿತಿರುವುದಾಗಿ ಕಂಡರು. ತಮ್ಮ ಸಂಗಡಿಗರನ್ನು ಶಹೀದರನ್ನಾಗಿ ಮಾಡಲಾಗಿದೆ ಎಂದು ಅವರಿಗೆ ತಿಳಿಯಿತು. ಹಝ್ರತ್ ಹಾರಿಸ್ ಹಝ್ರತ್ ಅಮರ್‌ರೊಂದಿಗೆ ಕೇಳಿದರು: ನಿಮ್ಮ ಅಭಿಪ್ರಾಯವೇನು? ನನ್ನ ಅಭಿಪ್ರಾಯ ಹಝ್ರತ್ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ಹೋಗಿ ಅವರಿಗೆ ಸಮಾಚಾರ ನೀಡಬೇಕೆಂದಾಗಿದೆ. ಹಝ್ರತ್ ಹಾರಿಸ್ ಹೇಳಿದರು– ಮುಂಝಿರ್‌ರನ್ನು ಎಲ್ಲಿ ಕೊಲ್ಲಲಾಯಿತೋ ಅಲ್ಲಿಂದ ನಾನು ದೂರ ಸರಿಯಲಾರೆ. ಹಾಗೆ ಅವರು ಮುಂದೆ ಸಾಗಿ ಹೋರಾಡುತ್ತಾ ಶಹೀದರಾದರು. ಹಝ್ರತ್ ಅಬ್ದುಲ್ಲಾ ಬಿನ್ ಅಬೀ ಬಕರ್ ಹೇಳುತ್ತಾರೆ: ಶತ್ರುಗಳು ನಿರಂತರವಾಗಿ ಎಸೆಯುತ್ತಿದ್ದ ಈಟಿಯ ಕಾರಣದಿಂದ ಅವರು ಶಹೀದರಾದರು. ಆ ಈಟಿಗಳು ಅವರ ದೇಹಕ್ಕೆ ನಾಟಿ ಅವರು ಶಹೀದರಾದರು.

ಅಲ್ಲಾಹನು ಈ ಎಲ್ಲಾ ಬದರೀ ಸಹಾಬರ ಪದವಿಗಳನ್ನು ಉನ್ನತಗೊಳಿಸುತ್ತಾ ಇರಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis(atba)***

*At,Masjid Baithul Futhuh London, UK. On 08-02-2019.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon